St. Claret College

Autonomous, Bengaluru

Roll No:
Date:

UG END SEMESTER EXAMINATION, MAY- 2026

BCOM/TTM/BBA, IV SEMESTER

KAC 425, VANIJYA NIRVAHANA KANNADA - 4

TIME: 03:00 HOURS. 19 **MAX.MARKS:80**

This paper contains Two printed pages and A to C parts

Instructions:

1. **Verify and ensure that the question paper is completely printed.**
2. **Any discrepancies or questions about the exam paper must be reported to the COE within 1 hour after the examination.**
3. **Students must check the course title and course code before answering the questions.**

PART-A

ಐದು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ **5x2=10**

1. ಯೂಲಿಸಿಸ್ ಯಾರು?
2. ಕಡಲ ದಂಡೆಯು ಈಗ ಮೊದಲಿನಂತಿಲ್ಲ ಯಾಕೆ?
3. ಅಮ್ಮ ಓದಿದ ಹೆಣ್ಣುಮಕ್ಕಳ ಬಗೆಗೆ ಹೊಂದಿದ್ದ ಕೀಳು ಅಭಿಪ್ರಾಯವೇನು?
4. ಬುಡೆನ್ ಸಾಬಿಯನ್ನು 'ಅಂಗಡಿಯ ಬುಡೆನ್ ಸಾಬಿ' ಎನ್ನಲು ಕಾರಣವೇನು?
5. ಮಲ್ಲಿ ದೇವಿಯ ಬಳಿ 'ಮುತ್ತೈದಿ ಸಾವು' ಬೇಡಿಕೊಂಡಾಗ ಲೇಖಕರಿಗಾದ ಅನುಭವವೇನು?
6. ಜೋಯಿಸರ ವ್ಯಕ್ತಿತ್ವ ಎಂಥದ್ದು?
7. ತುಂಬಾಡಿ ರಾಮಯ್ಯನವರ ತಂದೆಯ ದಶಾವತಾರಗಳು ಯಾವುವು?

ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ: **5x5=25**

8. ಫಾಲಿಫಿಮಸ್‌ನ ವ್ಯಕ್ತಿತ್ವವನ್ನು ಪರಿಚಯಿಸಿ.
9. 'ಕಡಲ ತೀರವು ಅಮ್ಮನಷ್ಟೇ ಪ್ರೀತಿಕೊಟ್ಟಂಥದ್ದು'? ಹೇಗೆ? ವಿವರಿಸಿ
10. 'ಅಮ್ಮಾ ಆಚಾರ, ನಾನು' ಕವಿತೆಯಲ್ಲಿ ಸಂಪ್ರದಾಯ ಮತ್ತು ಆಧುನಿಕತೆ ಹೇಗೆ ವ್ಯಕ್ತಗೊಂಡಿದೆ?
11. ಬುಡೆನ್ ಸಾಬಿಯ ಪಾತ್ರವನ್ನು ಪರಿಚಯಿಸಿ.
12. ಶ್ರೀಮತಿ ಮತ್ತು ವಜ್ರಜಂಘರ ಸಾವಿನ ಪ್ರಸಂಗದ ಕುರಿತು ಬರೆಯಿರಿ.
13. ಕಕರನ ಸಾವಿಗೆ ಕಾರಣವೇನು? ವಿವರಿಸಿ.
14. 'ಮಣೆಗಾರ' ಆತ್ಮಕತೆಯಲ್ಲಿ ವ್ಯಕ್ತಗೊಂಡಿರುವ ಕರ್ನಾಟಕದ ಗ್ರಾಮೀಣ ಆಚರಣೆಗಳನ್ನು ವಿವರಿಸಿ.

ಎರಡು ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿ : **2x10=20**

15. ಯೂಲಿಸಿಸ್‌ನು ಫಾಲಿಫೀಮಸ್‌ನಿಂದ ತಪ್ಪಿಸಿಕೊಳ್ಳಲು ಮಾಡಿದ ಉಪಾಯವೇನು? ವಿವರಿಸಿ.
16. 'ಭಜನೆಯ ಬುಡೆನ್ ಸಾಬಿ' ಕತೆಯಲ್ಲಿ ವ್ಯಕ್ತಗೊಂಡಿರುವ ಧಾರ್ಮಿಕ ಸಾಮರಸ್ಯದ ನೆಲೆಗಳನ್ನು ಪರಿಚಯಿಸಿ.
17. 'ಕಕರನ ಯುಗಾದಿ' ಕತೆಯಲ್ಲಿ ಬಡತನ, ಜಾತಿ ತಾರತಮ್ಯ ಮತ್ತು ಮೌಢ್ಯತೆ ವ್ಯಕ್ತಗೊಂಡಿರುವ ಬಗೆಯನ್ನು ವಿಶ್ಲೇಷಿಸಿ.
18. 'ಮಣೆಗಾರ' ಕೃತಿಯಲ್ಲಿ ವ್ಯಕ್ತಗೊಂಡಿರುವ ತಳ ಸಮುದಾಯದ ಸಂವೇದನೆಗಳನ್ನು ವಿಶ್ಲೇಷಿಸಿ.

PART-B

19. ಚಿಂದಾಲ್ ಕಂಪನಿಯಲ್ಲಿ ವ್ಯವಸ್ಥಾಪಕ ಹುದ್ದೆಗೆ ಅರ್ಜಿಸಹಿತ ಅಭ್ಯರ್ಥನ ಪತ್ರ ಬರೆಯಿರಿ 1x5=5

20. ಅಮೆರಿಕಾ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧವು ಜಗತ್ತಿನ ಮೇಲೆ ಉಂಟುಮಾಡುತ್ತಿರುವ ಪರಿಣಾಮಗಳ ಸನ್ನಿವೇಶವನ್ನು ಗಮನಿಸಿ

ಒಂದು ಕತೆ/ ಕವಿತೆ ಬರೆಯಿರಿ. 1x5=5

21. ಈ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ 1x5=5

ಯೂಲಿಸಿಸ್ಸನು ಪಾನಪಾತ್ರೆಗೆ ಅವನು ಕೇಳಿ ಕೇಳಿದಂತೆ ಮತ್ತೆ ಮತ್ತೆ ಗಟ್ಟಿ ಮದ್ಯವನ್ನು ಸುರಿದ. ರಾಕ್ಷಸನು ಅದನ್ನು ಹಾಗೇ ಹಾಗೇ ಹೊಟ್ಟೆಗಿಳಿಸಿದ. ಆ ತೀಕ್ಷ್ಣವಾದ ಮದಿರೆಯ ಪ್ರಭಾವದಿಂದ ದೈತ್ಯನಿಗೆ ತಲೆ ತಿರುಗಲಾರಂಭಿಸಿತ್ತು. "ಸೈಕ್ಲೋಪ್ಸನೇ? ನನ್ನ ಹೆಸರು ಕೇಳಿದೆಯಲ್ಲವೇ? ಹೇಳುತ್ತೇನೆ ಕೇಳು. ನನ್ನ ಹೆಸರು 'ಇಲ್ಲಪ್ಪ' ಎಂದು, ಎಲ್ಲರೂ ನನ್ನನ್ನು ಹಾಗೆ ಕರೆಯುವುದು" ಎಂದು ಹೇಳಿದ ಯೂಲಿಸಿಸ್. "ಓ ಹೀಗೋ! ಅಯ್ಯಾ ಇಲ್ಲಪ್ಪ, ನೀನು ನನಗೆ ಅತ್ಯಂತ ರುಚಿಯಾದ ಮದ್ಯ ಕೊಟ್ಟು ನನ್ನನ್ನು ಸಂತೋಷಪಡಿಸಿದೆ. ಆದ್ದರಿಂದ ನಿನಗೊಂದು ಬಹುಮಾನ ಕೊಡುತ್ತೇನೆ! ಏನಪ್ಪಾ ಎಂದರೆ, ನಿನ್ನ ಕಡೆಯವರನ್ನೆಲ್ಲ ಮೊದಲು ತಿಂದು, ನಿನ್ನನ್ನು, ಹ? ಹ್ಹಾ! ಕೊನೆಗೆ, ಕೊನೆಗೆ ತಿನ್ನುತ್ತೇನೆ! ನಾನು ನಿನಗೆ ಮಾಡುವ ಉಪಕಾರವೆಂದರೆ ಇದೇ! ತಿಳಿಯಿತಲ್ಲ!' ಎಂದು ಹೇಳುತ್ತ ದೈತ್ಯ ಗಹಗಹಿಸಿ ನಕ್ಕ.

22. ಈ ಗದ್ಯ ಭಾಗವನ್ನು ಇಂಗ್ಲೀಷ್‌ಗೆ ಭಾಷಾಂತರಿಸಿ 1x5=5

ನಾನು ತುಮಕೂರು ಡೈರಿಯಲ್ಲಿ ಸ್ವಲ್ಪಕಾಲ ಕೆಲಸಮಾಡಿದೆ. ನನಗೆ ಈ ಕೆಲಸ ಸಿಕ್ಕುವುದಕ್ಕೆ ಪ್ರಮುಖವಾಗಿ ಇಬ್ಬರು ಕಾರಣರು. ಒಬ್ಬರು ಉಪನ್ಯಾಸಕ ಮಿತ್ರರು, ಇನ್ನೊಬ್ಬರು ಉಪನ್ಯಾಸಕ ವೃತ್ತಿಯಿಂದ ನಿವೃತ್ತರಾಗಿದ್ದ ಶಿಸ್ತಿನ ವ್ಯಕ್ತಿ ಮುತ್ತುಸ್ವಾಮಿಯವರು. ಆಗಿನ ಕೆ.ಎಂ.ಎಫ್.ನ ಎಂ.ಡಿ. ಆಗಿದ್ದವರು ಮುತ್ತುಸ್ವಾಮಿಯವರ ಸಂಬಂಧಿಕರು. ನನ್ನ ಮಿತ್ರರುರೊಬ್ಬರು ಬೆಳಿಗ್ಗೆ ಆರು ಗಂಟೆಗೆ ತುಮಕೂರಿನ ಗಾಂಧಿನಗರದಲ್ಲಿದ್ದ ಅವರ ಮನೆಗೆ ನನ್ನನ್ನು ಕರೆದುಕೊಂಡು ಹೋದರು. ಅಷ್ಟುಹೊತ್ತಿಗಾಗಲೇ ಮುತ್ತುಸ್ವಾಮಿಯವರು ಬೆಳಗಿನ ವಾಕಿಂಗ್‌ಗೆ ಹೋಗಿದ್ದರು. ನಾವೂ ಕೂಡ ಅವರು ಹೋಗಿದ್ದ ರಸ್ತೆಯಲ್ಲಿಯ ವಾಕಿಂಗ್ ಹೋಗೋ ರೀತಿ ಹೋದ್ವಿ, ಎದುರುಗಡೆಯಿಂದ ಬಂದ ಮುತ್ತುಸ್ವಾಮಿಯವರು 'ಹಲೋ ಹೌ ಆರ್ ಯೂ!' ಎಂದರು. ಅದಕ್ಕೆ ನನ್ನ ಮಿತ್ರರು 'ಫೈನ್ ಸರ್' ಅಂತ ಅಂದು ಜಾಗಿಂಗ್ ಮಾಡೋ ರೀತಿ ನಟನೆ ಮಾಡ್ತಾ, ನನ್ನ ಕೆಲಸದ ವಿಚಾರ ಅವರ ಗಮನಕ್ಕೆ ತಂದರು. ಅಷ್ಟು ಕೇಳಿದ ಮುತ್ತುಸ್ವಾಮಿಯವರು 'ನಾಳೆ ಅವರ ಮನೆಗೆ ಫಂಕ್ಷನ್‌ಗೆ ಹೋಗ್ತಾ ಇದ್ದೀನಿ. ಖಂಡಿತಾ ಹೇಳ್ತಿನಿ! ಡೋಂಟ್‌ವರಿ!' ಅಂದರು.

PART-C

ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ 1x5=5

23. ಹೆಲೆನ್ನಳನ್ನು ಅಪಹರಿಸಿದವರು ಯಾರು?

ಅ) ಟ್ರೋಮ್ ಆ) ಎಲೆಕ್ಟ್ರಾ ಇ) ಮಾಸ್ಕೋ ಈ) ಇಥಾಕಾ

24. ವಸುಂದರೆಯ ಗ್ಯಾನ ಕೃತಿಯ ಕರ್ತೃ ಯಾರು?

ಅ) ಹೆಚ್. ನಾಗವೇಣಿ ಆ) ಹೆಚ್ ಗಾಯಿತ್ರಿ ಇ) ಹೆಚ್. ಸುಂದರಿ ಈ) ಹೆಚ್. ಶೋಭಾ

25. ನಿತ್ಯೋತ್ಸವದ ಕವಿ ಎಂದು ಯಾರನ್ನು ಕರೆಯಲಾಗುತ್ತದೆ.

ಅ) ಅಬ್ದುಲ್ ಆ) ಕೆ. ಎಸ್. ನಿಸಾರ್ ಅಹಮ್ಮದ್ ಇ) ಪರ್ವಿನಾ ಶೇಕ್ ಈ) ನಸ್ರಿನಾ ಶೇಕ್

26. ಕಕರನ ಯುಗಾದಿ ಕತೆಯ ಕತೃ?

ಅ) ಪಿ ಲಂಕೇಶ್ ಆ) ಪಿ. ಮಂಕೇಶ್ ಇ) ಬೆಸಗರಹಳ್ಳಿ ರಾಮಣ್ಣ ಈ) ತುಂಬಾಡಿ ರಾಮಯ್ಯ

27. ತುಂಬಾಡಿ ರಾಮಯ್ಯ ಜನಿಸಿದ ಊರು ಯಾವುದು?

ಅ) ಬಾಲಹಳ್ಳಿ ಆ) ನಾಗನಹಳ್ಳಿ ಇ) ಗೊಲ್ಲಹಳ್ಳಿ ಈ) ನೀಲನಹಳ್ಳಿ

*****